**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 24.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್ ಎನ್ ಬಿ ವಕೀಲರಿಂದಃ**

2. ನನ್ನ ಅಜ್ಜನ ಹೆಸರು ಹನಮಂತಪ್ಪ ತಮ್ಮಣ್ಣ ಮುಳಗುಂದ. ನನ್ನ ಅಜ್ಜನಿಗೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಇಬ್ಬರು ಗಂಡು ಮಕ್ಕಳು. 750/1 ರ ಒಟ್ಟು ಕ್ಷೇತ್ರ 3 ಎಕರೆ 17 ಗುಂಟೆ ಆಗಿತ್ತು ಅದರಲ್ಲಿ 1 ಎಕರೆ 28 ಗುಂಟೆ ದಾವಾ ಶೆಡ್ಯೂಲ್-ಎ ಅನುಕ್ರಮ ನಂ.1 ಆಸ್ತಿ ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ. ಹಾಗೂ ಉಳಿದ ಹಿಸ್ಸೆ 1 ಎಕರೆ 28 ಗುಂಟೆ ರಾಮಪ್ಪನಿಗೆ ಬಂದಿರುತ್ತದೆ. 1992 ರ ಫೆಬ್ರವರಿ 15 ನೇ ತಾರೀಕಿನಂದು ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ಪ್ರತಿವಾದಪತ್ರದಲ್ಲಿ ತೋರಿಸಿರುವ ವಿಷಯವೇ ಬೇರೆ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಷಯವೇ ಬೇರೆ ಎಂದರೆ ಸರಿಯಲ್ಲ. ಸರ್ವೆ ನಂ.197 ಕ ರಲ್ಲಿ 12 ಎಕರೆ 36 ಗುಂಟೆ ಜಮೀನಿನಲ್ಲಿ ನಾವು ಅಸಲು ದಾವಾ ನಂ.309/1988 ರಲ್ಲಿ ರಾಜೀ ಮಾಡಿಕೊಂಡಿರುತ್ತೇವೆ. ದಾವಾ ಆಸ್ತಿಗಳನ್ನು ಸದರಿ ದಾವೆಯಲ್ಲಿ ಏಕೆ ಸೇರ್ಪಡೆ ಮಾಡಲಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರು ಹೇಳಲಿಲ್ಲ ಹಾಗಾಗಿ ನಾವು ಸೇರ್ಪಡೆ ಮಾಡಿಲಿಲ್ಲ ಎಂದು ನುಡಿಯುತ್ತಾರೆ. ನಾವು ವಕೀಲರಿಗೆ ದಾವಾ ಆಸ್ತಿಗಳನ್ನು ಸಹ ಸೇರ್ಪಡೆ ಮಾಡಿ ಎಂದು ಹೇಳಿದ್ದೇವು ಆದರೆ ಅವರು ಬೇಡ ಬೇಡ ಎಂದು ಹೇಳಿದ ಕಾರಣ ಸೇರ್ಪಡೆ ಮಾಡಲಿಲ್ಲ. ನನ್ನ ತಪ್ಪಿನಿಂದ ಅಸಲು ದಾವಾ ನಂ.309/1988 ರಲ್ಲಿ ದಾವಾ ಆಸ್ತಿಗಳಲ್ಲಿ ಸೇರಿಸಿಲ್ಲ ಹಾಗಾಗಿ ವಾದಿಗಳು ಹಿಸ್ಸೆ ಕೇಳಿ ಈ ದಾವೆ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಅಸಲು ದಾವಾ ನಂ.309/1988 ರಾಜೀ ಆಗುವಾಗ ಕೊಟ್ಟ ಹಿಸ್ಸೆನ್ನು ವಾದಿ

ತೆಗೆದುಕೊಂಡಿರುತ್ತಾರೆ ಹಾಗೂ ಆಗ ಆಕ್ಷೇಪಣೆ ಮಾಡಲಿಲ್ಲ ಎಂದು ನುಡಿಯುತ್ತಾರೆ. ನಾನು ಮುಂದೆ ಆಸ್ತಿ ಕೊಡುತ್ತೇನೆಂದು ಹೇಳಿದ ಕಾರಣ ವಾದಿಗಳು ಸದರಿ ಸಮಯದಲ್ಲಿ ಆಕ್ಷೇಪಣೆ ಸಲ್ಲಿಸಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಸರ್ವೆ ನಂ.770ರ ಪಿಹಣಿಯ ಆನ್ ಲೈನ್ ಪ್ರತಿಯನ್ನು ತೋರಿಸಿ ಸದರಿ ದಾಖಲೆ ಪ್ರಕಾರ 3 ಎಕರೆ 15 ಗುಂಟೆ ಜಮೀನು ಭೀಮಪ್ಪ ಹಾಗೂ ರಾಮಪ್ಪ ಇವರ ಹೆಸರಿನಲ್ಲಿ ಜಂಟಿಯಾಗಿದೆ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿದ್ದು ಸದರಿ ದಾಖಲೆಯನ್ನು ನಿಪಿ.30 ಎಂದು ಗುರುತಿಸಲಾಯಿತು. ನಿಪಿ.30 ದಾಖಲೆಯಲ್ಲಿ ಸದರಿ ಆಸ್ತಿ ಹನುಮಂತ ದೇವರ ಆಸ್ತಿ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಹನುಮಂತ ದೇವರ ಆಸ್ತಿ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಅದರಲ್ಲಿ ಹನುಮಂತ ದೇವರ ಪೂಜಾ ಕೆಲಸದ ಬಗ್ಗೆ ಎಂದು ನಮೂದು ಇದೆ ಹಾಗೂ ಚಾರಿಟಿ ಕಮಿಷನರ್ ಬೆಳಗಾವಿ ಇವರು ದಾನದತ್ತಿ ಇಲಾಖೆಗೆ ಸಂಬಂಧಪಟ್ಟ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ದಾನದತ್ತಿ ಇಲಾಖೆಗೆ ಸಂಬಂಧಿಸಿದ್ದು ಎಂದು ತೋರಿಸಲು ದಾಖಲೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಹುಡುಕಿದೆ ಆದರೆ ಸದರಿ ದಾಖಲೆಗಳು ಸಿಗಲಿಲ್ಲ ಆದರೆ ಪಟ್ಟಾ ಬುಕ್ ಹಾಜರಪಡಿಸುತ್ತೇನೆಂದು ನುಡಿಯುತ್ತಾರೆ. ಆ ರೀತಿ ಯಾವುದೇ ದಾಖಲೆಗಳು ಇಲ್ಲ ಹಾಗಾಗಿ ನಾನು ಸದರಿ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್-ಸಿ ಅನುಕ್ರಮ ನಂ.2 ಆಸ್ತಿ ಸರ್ವೆ ನಂ.200/1 ಡಿ ಆಸ್ತಿಯ ಪಹಣಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದು ಸದರಿ ದಾಖಲೆಯನ್ನು ನಿಪಿ.31 ಎಂದು ಗುರುತಿಸಲಾಯಿತು. ಸದರಿ ಆಸ್ತಿ ನಮ್ಮ ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ನಮ್ಮ ತಾಯಿ ತೀರಿಕೊಂಡ ನಂತರ ಸದರಿ ಆಸ್ತಿಯಲ್ಲಿ ವಾರಸಾ ನಾತೆಯಿಂದ ನಮ್ಮೆಲ್ಲರ ಹೆಸರು  ದಾಖಲಾಯಿತು ಎಂದರೆ ಸರಿ.

ದಾವಾ ಶಡ್ಯೂಲ್-ಸಿ ಅನುಕ್ರಮ ನಂ.2 ಆಸ್ತಿ ಸರ್ವೆ ನಂ.200/1 ಎ ಆಸ್ತಿಯ ಪಹಣಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದು ಸದರಿ ದಾಖಲೆಯನ್ನು ನಿಪಿ.32 ಎಂದು ಗುರುತಿಸಲಾಯಿತು. ಸದರಿ ಆಸ್ತಿಯನ್ನು ನಾವು ಖರೀದಿ ಹಿಡಿದಿರುತ್ತೇವೆ. ಸದರಿ ದಾಖಲೆಯಲ್ಲಿ ಮುಳಗುಂದ ಭೀಮಪ್ಪ ಹಾಗೂ ಇತರರು ಎಂದು ನಮೂದು ಇದೆ ಎಂದರೆ ಸರಿ. ಸದರಿ ಆಸ್ತಿಯನ್ನು ಖರೀದಿ ಹಿಡಿದ ಬಗ್ಗೆ ನಾನು ಖರೀದಿ ಪತ್ರ ಹಾಜರಪಡಿಸಿಲ್ಲ ಹಾಗೂ ಸದರಿ ಆಸ್ತಿ ನನ್ನ ತಂದೆ ಕಡೆಯಿಂದ ಬಂದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ಲೀಲಾವು ಆದಾಗ ನಾವೇ ಬ್ಯಾಂಕ್ ಸಾಲ ತುಂಬಿರುತ್ತೇವೆಂದು ನುಡಿಯುತ್ತಾರೆ. ಎಲ್ಲಾ ಆಸ್ತಿಗಳು ಸಾಮೂಹಿಕ ಆಸ್ತಿಗಳಾದ ಕಾರಣ ಸಾಮೂಹಿಕ ಆಸ್ತಿಗಳಿಂದ ಬಂದ ಉತ್ಪನ್ನದಿಂದ ಸಾಲ ಮರುಪಾವತಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಣ್ಣ ದುಡಿಯುತ್ತಿದ್ದರು ಟ್ರ್ಯಾಕ್ಟರ ಸಹ ದುಡಿಯುತ್ತಿತ್ತು ಮತ್ತು ನನ್ನ ಅಣ್ಣ ಪ್ಲಾಟ ಏಜೆನ್ಸಿ ಮಾಡುತ್ತಿದ್ದರು ಅದರಿಂದ ಬಂದ ಹಣದಿಂದ ಸಾಲ ತುಂಬಿರುತ್ತೇವೆಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರಪಡಿಸಿಲ್ಲ. ನಾವು 3 ಜನ ಅಣ್ಣತಮ್ಮಂದಿರು ಎಲ್ಲರೂ ವ್ಯವಸಾಯ ಮಾತ್ರ ಮಾಡುತ್ತಿದ್ದೇವು ಎಂದರೆ ಸಾಕ್ಷಿ ನನ್ನ ಅಣ್ಣ ಏಜೆನ್ಸಿ ಸಹ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಅಣ್ಣ ಏಜೆನ್ಸಿ ವ್ಯವಹಾರ ಮಾಡುತ್ತಿದ್ದರು ಎಂದು ತೊರೀಸಲು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ.

3. ಸಾಕ್ಷಿಗೆ ಸರ್ವೆ ನಂ.199 ರ ಪಹಣಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದು ಸದರಿ ದಾಖಲೆಯನ್ನು ನಿಪಿ.33 ಎಂದು ಗುರುತಿಸಲಾಯಿತು. ಸದರಿ ಆಸ್ತಿ ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು. ಸಾಕ್ಷಿಗೆ ಮ್ಯೂಟೇಶನ್ ನಂ.2934 ರ ಆನ್ ಲೈನ್ಸ್ ದೃ.ಪ್ರತಿಯನ್ನು ತೋರಿಸಲಾಗಿ ಸದರಿ ದಾಖಲೆಯ ಪ್ರಕಾರ ತಮ್ಮ ಹಾಗೂ ತಮ್ಮ

ಸಹೋದರಿಯವರ ಹೆಸರುಗಳು ವಾರಸಾ ನಾತೆಯಿಂದ ಸರ್ವೆ ನಂ.200/1 ಬಿ ಹಾಗೂ 200/1 ಡಿ ಆಸ್ತಿ ಗಳಿಗೆ ದಾಖಲಾಗಿದೆ ಎಂದು ಒಪ್ಪಿದ್ದು ಸದರಿ ದಾಖಲೆಯನ್ನು ನಿಪಿ.34 ಎಂದು ಗುರುತಿಸಲಾಯಿತು. ಸಾಕ್ಷಿಗೆ ಎಂ ಆರ್.ನಂ.80 ರ ಆನ್ ಲೈನ್ ದೃ.ಪ್ರತಿಯನ್ನು ತೋರಿಸಲಾಗಿ ಸದರಿ ದಾಖಲೆಯ ಪ್ರಕಾರ ಸದರಿ ದಾಖಲೆಯಲ್ಲಿ ತಮ್ಮ ತಂದೆಯ ಹೆಸರು ಇದೆ  ಒಪ್ಪಿದ್ದು ಸದರಿ ದಾಖಲೆಯನ್ನು ನಿಪಿ.35 ಎಂದು ಗುರುತಿಸಲಾಯಿತು. ದಾವಾ ಅಸ್ತಿಗಳಲ್ಲಿ ವಾದಿಗಳಿಗೆ ಹಿಸ್ಸೆ ಇದ್ದರೂ ಸಹ ಅವರಿಗೆ ಮೋಸ ಮಾಡಿ ನೀವು ಯಾವುದೇ ಹಿಸ್ಸೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಅವರು ಕೇಳಬೇಕಾಗಿತ್ತಲ್ಲ ಅವರು ಕೇಳಿಲ್ಲ ಹಾಗೂ ನಾವು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಕೇಳಿಲ್ಲ ಹಾಗೂ ನಾವು ಕೊಟ್ಟಿಲ್ಲ ಎಂದು ತೋರೀಸಲು ಯಾವುದೇ ದಾಖಲೆಗಳು ಇಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 197 ಕ ಅಸ್ತಿಯನ್ನು ವಾದಿಗಳಿಗೆ ಹಿಸ್ಸೆ ಕೊಟ್ಟ ಕಾರಣ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸುವ ಪ್ರಸಂಗ ಬಂದಿಲ್ಲ ಎಂದರೆ ಸಾಕ್ಷಿ ಹೌದು ಹಿಸ್ಸೆ ಕೊಟ್ಟಿರುತ್ತೇವೆ ಹಾಗೂ ಅವರು ತೆಗೆದುಕೊಂಡಿರುತ್ತಾರೆಂದು ನುಡಿಯುತ್ತಾರೆ. 1992-93 ನೇ ಇಸ್ವಿಯಲ್ಲಿ ಆದ ಆಪಸಾತ್ ವಾಟ್ನಿಯಲ್ಲಿ ನಮ್ಮ ಅಕ್ಕ ತಂಗಿಯರಿಗೆ ಪಾಲು ಕೊಟ್ಟಿಲ್ಲ ಎಂದರೆ ಸರಿ. ವಾದಿಗಳಿಗೆ ಯಾವುದೇ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ನಿಪಿ.5 ನ್ನು 1992-93 ರಲ್ಲಿ ವಾದಿಯರಿಗೆ ಮೋಸ ಮಾಡಿ ಸದರಿ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಕ್ಕನ ಗಂಡ ವಾಟ್ನಿ ಪತ್ರಕ್ಕೆ ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ. ನನ್ನ ಅಕ್ಕನ ಗಂಡನಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಹಾಗಾಗಿ ಅವರು ಸಹಿ ಮಾಡಲು ಸಹ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ಅವರು ಒಪ್ಪಿಯೇ ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ. 1992-93 ರಲ್ಲಿ ವಾಟ್ನಿ ಮಾಡಿಕೊಳ್ಳುವಾಗ ನನ್ನ

ಸಹೋದರಿ ಯಲ್ಲವ್ವ ಈಕೆಗೆ ಸದರಿ ವಿಷಯವನ್ನು ನಾವು ತಿಳಿಸಿರಲಿಲ್ಲ. ನಾವು ಸದರಿ ವಿಷಯವನ್ನು ತಿಳಿಸಿರಲಿಲ್ಲ ಹಾಗಾಗಿ ಅವರಿಗೆ ಆ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಕ್ಕನ ಗಂಡ ಬಂದಿದ್ದರೂ ಹಾಗೂ ಅವರು ಸಹ ವಾಟ್ನಿ ಪತ್ರಕ್ಕೆ ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ. ನನ್ನ ಸಹೋದರಿಗೆ ಸದರಿ ವಾಟ್ನಿ ಪತ್ರದ ವಿಷಯ ಗೊತ್ತಿರಲಿಲ್ಲ ಹಾಗಾಗಿ ಅವರು ಸದರಿ ದಾಖಲೆಯನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರದ ಪ್ಯಾರಾ ನಂ.8 ರಲ್ಲಿ ನಮೂದಿಸಿರುವ ವಿಷಯ ಸ್ಪಷ್ಟವಾಗಿಲ್ಲ ಹಾಗೂ ನ್ಯಾಯಾಲಯಕ್ಕೆ ತಪ್ಪು ದಾರಿ ತೋರಿಸಿರುವ ಉದ್ದೇಶದಿಂದ ಸದರಿ ವಿಷಯ ನಮೂದಿಸಿರುತ್ತೇನೆಂದರೆ ಸರಿಯಲ್ಲ. ಅದೇ ರೀತಿ ನಾವು 3 ಜನ ಸಹೋದರರು ನಮ್ಮ ಸ್ವಂತ ಆದಾಯದಿಂದ ಬಂದ ಹಣದಿಂದ ಮನೆ ಕಟ್ಟಿರುತ್ತೇವೆಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯನ್ನು ದಾವಾ ಆಸ್ತಿಗಳಿಂದ ಬಂದ ಉತ್ಪನ್ನದಿಂದ ಕಟ್ಟಿಸಿದ ಕಾರಣ ಸ್ವಂತ ಹಣದಿಂದ ಕಟ್ಟಿಸಿದ ಬಗ್ಗೆ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. 1992 ರಲ್ಲಿ ನಾವು ಕಾನೂನುಬದ್ಧವಾಗಿ ಪಾಲು ಮಾಡಿಕೊಂಡಿರುತ್ತೇವೆ ಹಾಗೂ 2009 ರಲ್ಲಿ ಖಾತೆ ಬದಲಾವಣೆ ಮಾಡಿಕೊಂಡಿರುತ್ತೇವೆ. ಸದರಿ ವಾಟ್ನಿ ಕಾನೂನುಬದ್ಧವಾಗಿ ಇಲ್ಲ ಹಾಗಾಗಿ ವಾದಿಯರಿಗೆ ಈ ದಾವೆ ಸಲ್ಲಿಸಲು ಕಾಲ ಪರಿಮಿತಿ ಅವಧಿ ಇದೆ ಎಂದರೆ ಸರಿ. ರಿಸ ನಂ.197 ರಲ್ಲಿ ಪ್ಲಾಟ್ ನಂ.47 ರಿಂದ 57 ಗಳನ್ನು ದೊಡ್ಡಲಿಂಗನಗೌಡರವರ ಜೊತೆ ಬದಲಿ ಮಾಡಿಕೊಂಡು ನಮಗೆ ಹೂವಿನಶಿಗ್ಲಿ ಗ್ರಾಮದ ರಿಸ ನಂ.199 ಪಡೆದುಕೊಂಡ ಕಾರಣ ವಾದಿಯರಿಗೆ ಸದರಿ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ28/02/2018 ರಂದು ಮಾಡಿಕೊಟ್ಟ ಭಕ್ಷಿಶ್ ಪತ್ರ ವಾದಿಗಳ ಹಿಸ್ಸೆಯ ಮೇಲೆ ಬಂಧನಕಾರಿಯಲ್ಲ ಎಂದರೆ ಸಾಕ್ಷಿ ನನ್ನ ಹಿಸ್ಸೆ ನಾನು

ಭಕ್ಷಿಶ್ ಮಾಡಿಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಾವು 3 ಜನ ಸೇರಿ ಮೃತ ವಾದಿಗೆ ಹಿಸ್ಸೆ ಕೊಡದೇ ದಾವಾ ಆಸ್ತಿಯಲ್ಲಿ ಪಾಲು ವಿಭಾಗ ಮಾಡಿಕೊಂಡ ಕಾರಣ ಸದರಿ ಪಾಲು ವಿಭಾಗ ಅವರ ಬಂಧನಕಾರಿಯಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾವಾ ಆಸ್ತಿಗಳಲ್ಲಿ ವಾದಿಯ ವಾರಸುದಾರರಾದ ವಾದಿ ನಂ.1(ಎ) ದಿಂದ (ಸಿ) ರವರಿಗೆ 1/5 ಹಿಸ್ಸೆ ಇದೆ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೊಡುವುದುನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**